## ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಪುತ್ತೂರು ದ.ಕ.

### ಸಿ.ಸಿ. ನಂಃ 3064/2019

ಚಾ.ಸಾ ಃ

ಪ್ರಾ.ಸಾ ಃ

ಸಾಕ್ಷಿದಾರರ ಹೆಸರು ಃ ನಾಗರಾಜ

ತಂದೆಯ ಹೆಸರು ಃ ಆಂಡವನ್

ಪ್ರಾಯ ಃ 35 ವರ್ಷ

ಉದ್ಯೋಗ ಃ ಪೆಟ್ರೋಲ್ ಪಂಪಿನಲ್ಲಿ ಕೆಲಸ

ವಾಸಸ್ಥಾನ : ಮಂಜಲ್ಪಡ್ಪು

ಪ್ರಮಾಣ ವಚನ ಭೋದಿಸಿದ ದಿನಾಂಕ ಃ 26.10.2021

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ**

ನಾನು ಮಂಜಲ್ಪಡ್ಪುವಿನ ಭಾರತ್ ಪೆಟ್ರೋಲ್ ಪಂಪಿನಲ್ಲಿ 5 ವರ್ಷದಿಂದ ಕೆಲಸ ಮಾಡುತ್ತಿದ್ದೇನೆ. ಸುಮಾರು 4 ವರ್ಷದ ಹಿಂದೆ ರಾತ್ರಿ ಒಂದು ಹುಡುಗ ಇನೋವಾ ಕಾರಿನಲ್ಲಿ ಬಂದರು. ಡೀಸಲ್ ಫುಲ್ ಮಾಡಿ ಎಂದರು 3000 ಚಿಲ್ಲರೆ ಹಣದ ಡೀಸಲ್ ಫುಲ್ ಮಾಡಿದೆನು. ಪಾಸ್ ಪೋರ್ಟ್ ನೀಡಿ ಮನೆಗೆ ಹೋಗಿ ಹಣ ತಂದು ಕೊಟ್ಟು ನಂತರ ಪಾಸ್ ಪೋರ್ಟ್ ವಾಪಾಸು ಪಡೆಯುತ್ತೇನೆ ಎಂದರು. ನಂತರ ಒಂದು ವಾರವಾದರೂ ಆತ ಮರಳಿ ಬರಲಿಲ್ಲ. ನಂತರ ಪೋಲೀಸರೊಂದಿಗೆ ಡೀಸೆಲ್ ಹಾಕಿಕೊಂಡು ಹೋದ ಹುಡುಗ ಇದ್ದನು. ಪೋಲೀಸರು ಡೀಸೆಲ್ ಹಾಕಿಕೊಂಡು ಹೋದ ವ್ಯಕ್ತಿ ಈತನಾ ಎಂದು ಕೇಳಿದಾಗ ಹೌದು ಎಂದೆ. ಆರೋಪಿ ನನ್ನಲ್ಲಿ ಪಾಸ್ ಪೋರ್ಟ್ ಇರುವ ಬಗ್ಗೆ ಹೇಳಿರುತ್ತಾನೆ. ಪಾಸ್ ಪೋರ್ಟ್ ಪಡೆದುಕೊಳ್ಳುವಾಗ ಪಡೆದುಕೊಂಡ ಬಗ್ಗೆ

ಪೋಲೀಸರು ಪೋಟೋ ತೆಗೆದಿರುತ್ತಾರೆ. ದಿ.19-08-17 ರ ಸ್ವತ್ತು ಸ್ವಾದೀನ ಮಹಜರನ್ನು ಸಾಕ್ಷಿಗೆ ತೋರಿಸಿದಾಗ ಸಾಕ್ಷಿಯು ತನ್ನ ಸಹಿ ನೋಡಿ ಗುರುತಿಸಿದ್ದು ನಿಪಿ 9 ಎಂದು, ಸಾಕ್ಷಿಯ ಸಹಿಯನ್ನು ನಿಪಿ 9 ಎ ಎಂದು ಗುರುತಿಸಲಾಯಿತು. ಮಹಜರನ್ನು ಸಾಕ್ಷಿಗೆ ತೋರಿಸಿದಾಗ ಸಾಕ್ಷಿಯು ತನ್ನ ಸಹಿ ನೋಡಿ ಗುರುತಿಸಿದ್ದು ನಿಪಿ 9 ಎ ಎಂದು ಗುರುತಿಸಲಾಯಿತು. ಸದರಿ ಮೂಲ ದಾಖಲಾತಿ ಸದರಿ ಕಡತದಲ್ಲಿಯೇ ಇರುತ್ತದೆ. ನ್ಯಾಯಾಲಯವು ಪರಿಶೀಲಿಸಿ 9 ಎ ಎಂದು ಗುರುತಿಸಲಾಯಿತು. ಪಾಸ್ಪೋರ್ಟನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ ಅದನ್ನು ನಿಪಿ-10 ರಿಂದ 13 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು : ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸ.ಸ.ಅ. ರವರಿಂದಃ**

**2017** ವರ್ಷ ಜೂನ್ ತಿಂಗಳ ಕೊನೆಯ ವಾರದಲ್ಲಿ ನಾನು ಪೆಟ್ರೋಲ್ ಬಂಕಲ್ಲಿ ಕೆಲಸ ಮಾಡುತ್ತಿದ್ದಾಗೆ ಆರೋಪಿ ಮಹಮ್ಮದ್ ಸಾದಿಕ್ **2000** ಪೆಟ್ರೋಲ್ ಹಾಕಿಸಿದ್ದ ಎಂದರೆ ರಾತ್ರಿ ಎನ್ನುತ್ತಾರೆ. ಮೊದಲು ಎಟಿಎಂ ಕಾರ್ಡ್ ಕೊಟ್ಟು ಅದರಲ್ಲಿ ಹಣ ವಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಹೇಳಿಕೆ ಭಾಗ ಓದಿ ಹೇಳಲಾಗಿ ಸಾಕ್ಷಿಯು ಅಲ್ಲಗಳೆದಿರುವುದರಿಂದ ಹೇಳಿಕೆಯನ್ನು ನಿಪಿ **14** ಎಂದು

ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ 2 ನೇ ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸಿರುವುದಿಲ್ಲ.

ಪಾಟೀ ಸವಾಲುಃ ಆರೋಪಿ ಪರ ಶ್ರೀಯುತ ಡಿಕೆ ವಕೀಲರಿಂದಃ

ಸದರಿ ಭಾರತ್ ಪೆಟ್ರೋಲ್ ಬಂಕ್ನ ಓನರ್ ನರೇಂದ್ರ. ಪೆಟ್ರೊಲ್ ಬಂಕಲ್ಲಿ ಕ್ಯಾಶಿಯರ್ಗೆ ಹಣ ನೀಡುತ್ತಾರೆ ಎಂದರೆ ಸಾಕ್ಷಿಯು ನಾನೇ ಕ್ಯಾಶೀಯರ್ ಎನ್ನುತ್ತಾರೆ. ಸದರಿ ಪೆಟ್ರೋಲ್ ಬಂಕ್ನ ಕ್ಯಾಶೀಯರ್ ನಾನೇ ಎಂದು ಪೋಲೀಸರಿಗೆ ಯಾವುದೇ ದಾಖಲೆ ನೀಡಿಲ್ಲ. ಪೆಟ್ರೊಲ್ ಹಾಕಿಸಿಕೊಳ್ಳುವ ಸ್ಥಳದಲ್ಲಿ ಹಣ ಪಾವತಿಸಿ ಹೊರಟು ಹೋಗುತ್ತಾರೆ, ಕ್ಯಾಶೀಯರ್ ಬಳಿ ಹೋಗುವ ಅವಶ್ಯಕತೆ ಇಲ್ಲ ಎಂದರೆ ಸರಿ. ನಮ್ಮ ಬಂಕಲ್ಲಿ ಎಟಿಎಂ ಸ್ವೈಪ್ ಕಾರ್ಡ ಇದೆ, ನಾನು ಸೇರುವ ಮುನ್ನವೇ ಇದೆ. ಯಾವುದೇ ಒಬ್ಬ ವ್ಯಕ್ತಿಯು ಪಾಸ್ ಪೋರ್ಟ್ ನೀಡಿದರೆ ಪೆಟ್ರೊಲ್ ಕೊಡುತ್ತೀರಾ ಎಂದರೆ ಇಲ್ಲ. ಇನೋವಾ ಕಾರ್ ನಂ ಗೊತ್ತಿಲ್ಲ, ಸದರಿ ಕಾರಿನಲ್ಲಿ ಒಬ್ಬರು ಮಾತ್ರ ಇದ್ದರು. ನಮ್ಮ ಬಂಕಲ್ಲಿ ಪ್ರಕರಣದ ಕಾಲಕ್ಕೆ ಸಿಸಿ ಕ್ಯಾಮೆರಾ ಇರಲಿಲ್ಲ. ನನ್ನನ್ನು ಪೊಲೀಸರು ವಿಚಾರಣೆ ಮಾಡಿಲ್ಲ. ನಿಪಿ 6 ರಲ್ಲಿರುವ ಪಾಸ್ ಪೋರ್ಟ್ ಯಾರಿಗೆ ಸಂಬಂಧಿಸಿದ್ದು ಎಂದು ಕಂಡುಬರುವುದಿಲ್ಲ ಎಂದರೆ ಸರಿ. ನನಗೆ ಯಾರ ಹೆಸರಿನವರ ಪಾಸ್ ಪೋರ್ಟ್ ನೀಡಲಾಗಿದೆ ಎಂದು ಹೆಸರು ಗೊತ್ತಿಲ್ಲ.

ನಮ್ಮ ಪೆಟ್ರೋಲ್ ಬಂಕಲ್ಲಿ ಯಾರೂ ಪಾಸ್ ಪೋರ್ಟ್ ನೀಡಿ ಪೆಟ್ರೋಲ್ ಹಾಕಿಸಿಲ್ಲ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಪೋಲೀಸ್ ಠಾಣೆಗೆ ಹೋಗಿಲ್ಲ. ಪೆಟ್ರೋಲ್ ಹಾಕಿಸಿ ಒಂದು

ವಾರದ ನಂತರ ಪೋಲೀಸರು ನಮ್ಮ ಬಂಕ್ಗೆ ಬಂದಿರುತ್ತಾರೆ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸ್ಥಳದಲ್ಲಿ ಯಾವುದೇ ಮಹಜರು ಮಾಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು,ದ.ಕ.